ಕತೆ

**ಕಂನಾಡಿಗಾ ನಾರಾಯಣ**

ಕಲೆ: ಕಿರಣ ನಾಯಕ ಹೊನ್ನಾವರ



# ಸೇತುಬಂಧನ

ಸಹ್ಯಾದ್ರಿಯ ದಟ್ಟ ಕಾಡಿನ ನಟ್ಟನಡುವೆ ಮೆರೆಯುತ್ತಿದ್ದ ಅವಿನಾಶಿ ಎಂಬ ಪುಟಾಣಿ ಗ್ರಾಮವು ವನಸಿರಿಯಿಂದ ಸಮೃದ್ಧವಾಗಿದ್ದು, ಆಧುನಿಕತೆಯ ಕೃತಕತೆಯು ಒಂದಿಂಚೂ ತಗುಲದಂತೆ ಬಹಳ ಕಾಲ ಉಳಿದುಬಂದಿತ್ತು. ಮಳೆಗಾಲವೆಂದರೆ ಸಕಲ ಆರು ತಿಂಗಳೂ ಎಡೆಬಿಡದೆ ಸುರಿವ ಮಳೆ, ಸೂರ್ಯನೊಡನೆ ಜೂಟಾಟವಾಡುವಂತೆ ನುಗ್ಗಿಬರುತ್ತ ನಮ್ಮನ್ನೇ ಹೊತ್ತೊಯ್ಯುವಂಥ ದಟ್ಟಮೋಡಗಳು, ಕೈಗೇ ಸಿಕ್ಕುಬಿಡುವಷ್ಟು ಕೆಳಗೆ ಸುಳಿಗಾಳಿಗೆ ತೇಲಿಬರುವ ಬಿಳಿಹರಳೆಯಂಥ ತಿಳಿಮೋಡಗಳು... ಹೀಗೆ ಹೊರಗಿನ ಜನಕ್ಕೆ ಮುದನೀಡುವಂಥ ವಾತಾವರಣ. ಆದರೆ ಅಲ್ಲಿನ ಜನಕ್ಕೆ ಅದೇ ಕಾಡು, ಅದೇ ಮೋಡ, ಅದೇ ಮಳೆ, ಅದೇ ನೀರು ಎಂದು ತಲೆ ಚಿಟ್ಟುಹಿಡಿದುಹೋಗುವಂತಾಗಿತ್ತು...

ವಿಶ್ವೇಶ್ವರಯ್ಯನವರೇನೋ ವ್ಯರ್ಥವಾಗಿ ನೀರು ಹರಿಯುತ್ತಿದೆಯೆಂದು ಮಮ್ಮಲ ಮರುಗಿ ದೂರದ ಕನಸನ್ನು ಕಂಡುಬಿಟ್ಟರು. ಆದರೆ ಡ್ಯಾಮನ್ನ ಕಟ್ಟಿದ ನಂತರ ಶರಾವತಿಯ ಹಿನ್ನೀರು ಶರಧಿಯೋಪಾದಿಯಲ್ಲಿ ಸಿಕ್ಕಸಿಕ್ಕಲ್ಲೆಲ್ಲಾ ವ್ಯಾಪಿಸಿ ಸಾವಿರಾರು ಹೆಕ್ಟೇರು ಕಾಡನ್ನು ಕಬಳಿಸಿ ನಿಂತುಬಿಟ್ಟಿತ್ತು. ಹಿನ್ನೀರಿನ ಆ ಭೂರಮೆಯ ಸ್ತನಮಂಡಲದಂಥ ನಡುಗಡ್ಡೆಗಳಲ್ಲಿ ಸಿಲುಕಿ